ಅವನು ತಲೆಯಲ್ಲಾಡಿಸಿದ. ಒಂದು ನ್ಯೂಸ್ ಪೇಪರಿನ ತುಂಡಿನಲ್ಲಿ ಎರಡು ಖಾರಾಬನ್ನುಗಳನ್ನು ಕಟ್ಟಿ ಅವಳು ಅವನ ಕೈಗಿತ್ತಳು.

ಅವನಿಗೇನೂ ಸಿಗರೇಟು ಸೇದುವ ಅಭ್ಯಾಸವಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಸೇದುವುದಿತ್ತು. ಇತ್ತೀಚೆಗೆ ತುಂಬ ದಿನಗಳಿಂದ ಅವನು ಸೇದಿರಲಿಲ್ಲ. ಈಗ ಅವನಿಗೆ ಒಂದು ಸಿಗರೇಟು ಸೇದಿದರೆ ಹೇಗೆ ಅನ್ನಿಸಿತು. 'ಒಂದು ಸಿಗರೇಟನ್ನೂ ಕೊಡಿ' ಎಂದ. 'ಯಾವುದು?' ಎಂದಾಕೆ ಕೇಳಿದಳು. ಅವನು ಹೇಳಿ 'ಎಷ್ಟು?' ಎಂದ. 'ಈಗ ಸಿಗರೇಟು ತುಂಬ ದುಬಾರಿಯಾಗಿದೆ, ಅಲ್ಲವೇ?' ಎಂದವನು ಉದ್ಗರಿಸಿದಾಗ ಅವಳು ತುಟಿ ಹಿಗ್ಗಿಸಿ ಮುಗುಳು ನಕ್ಕಳು. ಅವನು ಐವತ್ತರ ಒಂದು ನೋಟನ್ನು ಕೊಟ್ಟಾಗ ಆಕೆ ಚಿಲ್ಲರೆ ಹಣವನ್ನು ಕೊಡುತ್ತಾ, 'ಒಂದು ರೂಪಾಯಿ ಚಿಲ್ಲರೆ ಇಲ್ಲ. ಒಂದು ಚಾಕಲೇಟ್ ಕೊಡಲೇ?' ಎಂದಳು. 'ಬೇಡ. ಅದರ ಬದಲು ಒಂದು ಬೆಂಕಿಪೊಟ್ಟಣ ಕೊಡಿ' ಎಂದು ಹೇಳಿ ಅದನ್ನು ಪಡೆದು ಅವನು ಅಲ್ಲಿಂದ ಹೊರಬಿದ್ದ. ಅವನ ಮನಸ್ಸು ಯಾಕೋ ಆಹ್ಲಾದಗೊಂಡಿತ್ತು. ಅವಳ ಜೊತೆ ಇನ್ನೊಂದಷ್ಟು ಹೊತ್ತು ಮಾತನಾಡುತ್ತಾ ನಿಲ್ಲಬೇಕಿತ್ತು ಎಂದೂ ಅನ್ನಿಸಿತ್ತು.

ಅವನಿಗೆ ಹತ್ತಿರದಲ್ಲಿಯೇ ಒಂದು ಪಾರ್ಕ್ ಇದ್ದುದು ಗೊತ್ತಿತ್ತು. ಪಾರ್ಕಿನ ಒಳ ಅಂಚಿನ ಉದ್ದಕ್ಕೂ ವಾಕ್ ಮಾಡುವವರಿಗೆ ಒಂದು ಹಾದಿ ಕಟ್ಟಿಸಿದ್ದರು. ಅಲ್ಲಲ್ಲಿ ಸಿಮೆಂಟಿನ ಬೆಂಚುಗಳನ್ನೂ ಹಾಕಿದ್ದರು. ಈ ಹಿಂದೆ ಎಷ್ಟೋ ಬಾರಿ ಅವನು ಆ ಹಾದಿಯಲ್ಲಿ ತನ್ನ ವಾಕಿಂಗ್ ನಡೆಸಿದ್ದ. ಆಯಾಸವಾದಾಗ ಬೆಂಚಿನ ಮೇಲೆ ಒರಗಿದ್ದ. ಇಂದು ಅವನಿಗೇನೂ ಮನೆಗೆ ಹೋಗುವ ಆತುರವಿರಲಿಲ್ಲ. ಆದುದರಿಂದ ಪಾರ್ಕಿಗೆ ಹೋಗಿ ಯಾವುದಾದರೂ ಪ್ರಶಸ್ತ ಸ್ಥಳದಲ್ಲಿ ಕುಳಿತು ಖಾರಾಬನ್ ತಿನ್ನುವುದು, ಆ ಮೇಲೆ ನಿಧಾನವಾಗಿ ಸಿಗರೇಟ್ ಸೇದಿ ಮತ್ತೆ ಮನೆಗೆ ಹೋಗುವುದು ಎಂದವನು ನಿರ್ಧರಿಸಿ ಪಾರ್ಕಿನ ಒಳಗೆ ಹೊಕ್ಕ.

ಪಾರ್ಕು ನಿರ್ಜನವಾಗಿತ್ತು. ನಡೆಯುವ ಹಾದಿಯನ್ನೂ ಗುಡಿಸಿರಲಿಲ್ಲ. ಕಸಕಡ್ಡಿಗಳು ಎಲ್ಲ ಕಡೆಯೂ ಹರಡಿಕೊಂಡಿದ್ದವು. ಹಿಂದಿನ ಸಂಜೆ ವಿಹಾರಕ್ಕೆಂದು ಬಂದ ಸಂಸಾರದ ಮಂದಿ ಅಲ್ಲಿಯೇ ತಿಂಡಿ ಊಟ ಮಾಡಿರಬೇಕು. ಎಂಜಲೆಲೆಗಳು, ಪೇಪರ್ ಕಪ್ಸ್, ಎಲ್ಲ ಅಲ್ಲಲ್ಲೇ ಬಿದ್ದಿದ್ದವು. ಗಾಳಿಗೆ ಅವು ಹಾರಿ ಎಲ್ಲ ಕಡೆಯೂ ಹರಡಿಕೊಂಡಿದ್ದುವು. ಹಸುರು 'ಲಾನ್'ನ ಒಂದು ಕಡೆಯಲ್ಲಿ ತಿಂದು ಉಳಿದ ಪುಳಿಯೋಗರೆಯೋ ಚಿತ್ರಾನ್ನವೋ ಬಿಸಾಡಿದ್ದು ಮುದ್ದೆಯಾಗಿ ಬಿದ್ದಿತ್ತು. ಬಿಸಿಲಿಗೆ, ಗಾಳಿಗೆ ಅದರ ಮೇಲ್ಪದರ ಒಣಗಿದರೂ ಒಳಗೆ ಹಸಿಹಸಿಯಾಗಿ ಕೊಳೆತಿತ್ತು. ಜನರು ಯಾಕೆ ಹೀಗೆ ಕಸ ಚೆಲ್ಲುತ್ತಾರೆ ಎಂದವನು ಯೋಚಿಸಿದ. ತನ್ನ ಕೆಲಸದ ಸಂಬಂಧ ಅವನ ಆಫೀಸಿನವರು ಒಮ್ಮೆ ಅವನನ್ನು ಹಾಂಗ್‌ಕಾಂಗಿಗೆ ಕಳಿಸಿದ್ದರು. ಅಲ್ಲಿಯ ಒಂದು ಪಾರ್ಕಿನಲ್ಲಿಯೂ ಜನಜಂಗುಳಿಯಿತ್ತು. ಆದರೆ ಒಂದೇ ಒಂದು ಕಸ ಅಲ್ಲಿ ಕಂಡಿರಲಿಲ್ಲ. ಅದರ ನೆನಪಾಗಿ ತನ್ನ ದೇಶದ ಜನರು ಯಾವಾಗ ಅಂಥ ಅಭ್ಯಾಸ ಮಾಡಬಲ್ಲರು ಎಂದವನು ಯೋಚಿಸಿದ.

ಅವನು ಹೆಚ್ಚು ಕೊಳೆಯಿಲ್ಲದ ಒಂದು ಜಾಗ ಹುಡುಕಿ ಬೆಂಚಿನ ಮೇಲೆ ಕುಳಿತು ಕೈಲಿದ್ದ ತನ್ನ ಖಾರಾಬನ್ನುಗಳ ಪೇಪರಿನ ಪ್ಯಾಕೇಟನ್ನು ಬಿಚ್ಚಿದ. ನಿಧಾನವಾಗಿ ಒಂದು ಖಾರಾ ಬನ್ನನ್ನು ತೆಗೆದು ಕಚ್ಚಿಕಚ್ಚಿ ತಿನ್ನತೊಡಗಿದ. ಬನ್ನು ಖಾರವಾಗಿಯೇ ಇತ್ತು. ಸ್ವಲ್ಪ ಗಟ್ಟಿಯಾಗಿಯೂ ಇತ್ತು. ಅಂಥ ರುಚಿಯಾಗಿಯೂ ಇರಲಿಲ್ಲ. ಹಿಂದಿನ ದಿನ ಮಾಡಿ ಮಿಕ್ಕಿದ್ದಿರಬೇಕು. ಅಗಿದು ತನ್ನ ಜೊಲ್ಲಿನೊಂದಿಗೆ ಮಿಲಾಯಿಸಲು ಅವನಿಗೆ ತುಸು ಹೊತ್ತೇ ಹಿಡಿಯಿತು. ಆದರೆ ಬೇಕರಿಯಲ್ಲಿ